**ಇಂದು ದಿನಾಂಕಃ 01-04-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿ ಪರವಾಗಿ ಶ್ರೀ MSS ವಕೀಲರಿಂದಃ-**

ನನ್ನ ಮುಖ್ಯವಿಚಾರಣೆಯ ಸಂಗತಿಗಳು ಮತ್ತು ನನ್ನ ಪ್ರತಿವಾದ ಪತ್ರದ ಸಂಗತಿಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿ 2ನೇ ಪ್ರತಿವಾದಿಯ ಸ್ತ್ರೀಧನ ಆಸ್ತಿ ಎಂದು ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಇದೆ ಎಂದರೆ ಸರಿ. 2ನೇ ಪ್ರತಿವಾದಿ ಈಗ ಜೀವಂತ ಇದ್ದಾರೆ. 2ನೇ ಪ್ರತಿವಾದಿ ತಮ್ಮ ಮಗನಾದ 3ನೇ ಪ್ರತಿವಾದಿಗೆ ಯಾವುದೇ ನೊಂದಣಿ ದಾಖಲೆ ಮುಖಾಂತರ ಆಸ್ತಿ ನೀಡಿಲ್ಲ ಎಂದರೆ ಸಾಕ್ಷಿ ಹಾಗಿದ್ದರೆ ನನಗೆ ಹೇಗೆ ನೊಂದಣಿ ಮಾಡಿಕೊಡುತ್ತಾರೆ ಎಂದು ಮರುಪ್ರಶ್ನೆ ಮಾಡುತ್ತಾರೆ. 2ನೇ ಪ್ರತಿವಾದಿ 3ನೇ ಪ್ರತಿವಾದಿಗೆ ಯಾವ ದಾಖಲೆ ಮುಖಾಂತರ ಆಸ್ತಿ ನೀಡಿದ್ದಾರೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ 3ನೇ ಪ್ರತಿವಾದಿಗೆ ಬರೆದುಕೊಟ್ಟ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ ಎಂದರೆ ಸರಿ. 3ನೇ ಪ್ರತಿವಾದಿ ನನಗೆ ನೀಡಿರುವ ದಾಖ್ಲೆಯಲ್ಲಿ 2ನೇ ಪ್ರತಿವಾದಿ ಸಹಿ ಇಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಯಾವ ದಿನಾಂಕದಂದು ದಾವಾ ಜಮೀನಿನ ಮಾರಾಟದ ಮಾತುಕತೆ ಆಗಿತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ 2009 ರ ಬಿತ್ತನೆ ಸಮಯಕ್ಕೆ ಆಗಿತ್ತು ಮತ್ತು 1 ತಿಂಗಳ ನಂತರ ನೂಂದಣಿ ಆಗಿದೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಮಾರಾಟದ ಮಾತುಕತೆ ಮಿರಿಯಾಣದ 3ನೇ ಪ್ರತಿವಾದಿ ಮನೆಯಲ್ಲಿ ಆಗಿತ್ತು. ಆ ಸಮಯಕ್ಕೆ ಗೀರಯ್ಯ ಸ್ವಾಮಿ, ಜಗದೀಶ್ವರಯ್ಯ, ವಿಲಾಸರಾವ ತಂದೆ ರಾಮಾರಾವ, ದಿನೇಶರಾವ ತಂದೆ ರಾಮಾರಾವ ಹಾಗೂ ನಾನು ಇದ್ದೇವು. ಬೇರೆ ಗ್ರಾಮಕ್ಕಿಂತ ಮಿರಿಯಾಣ ಹಾಗೂ ಕಿಷ್ಟಾಪೂರ ಗ್ರಾಮದ ಜಮೀನಿನ ಮೌಲ್ಯ ಹೆಚ್ಚು ಇದೆ ಎಂದರೆ ಸಾಕ್ಷಿ ಮೊದಲು ಇರಲಿಲ್ಲ ಈಗ ಆಗಿದೆ ಎಂದು ನುಡಿಯುತ್ತಾರೆ. ಮಾತುಕತೆ ಸಮಯಕ್ಕೆ 3ನೇ ಪ್ರತಿವಾದಿ 1 ಲಕ್ಷ 23 ಸಾವಿರ ಹಣಕ್ಕೆ ಕೇಳಿದ್ದು ನಾನು ಸದರಿ ಹಣಕ್ಕೆ ಒಪ್ಪಿ ಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ಮಾತುಕತೆಯಾದ ಜಮೀನಿನ ವಿಸ್ತೀರ್ಣ 5 ಎಕರೆ 04 ಗುಂಟೆ ಇದೆ. ಮಾತುಕತೆ ಸಮಯಕ್ಕೆ ನನ್ನ ಮತ್ತು 3ನೇ ಪ್ರತಿವಾದಿ ಮಧ್ಯ ವ್ಯವಹಾರ ಆದ ಬಗ್ಗೆ ದಾಖಲೆಯಲ್ಲಿ ಬರೆಯಲಾಗಿತ್ತು. ಮಾತುಕತೆ ಸಮಯಕ್ಕೆ 3ನೇ ಪ್ರತಿವಾದಿಗೆ 1 ಲಕ್ಷ ಹಣ ನೀಡಿದ್ದೇನೆ. ಸದರಿ ದಾಖಲೆಯಲ್ಲಿ ಸಹ 1 ಲಕ್ಷ ನೀಡಿದ ಬಗ್ಗೆ ಉಲ್ಲೇಖವಿದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನೊಂದಣಿ ಆದ ನಂತರ ಅದನ್ನು ಹರಿದುಬಿಸಾಕಿದ್ದೇವೇ ಎಂದು ನುಡಿಯುತ್ತಾರೆ. ನೊಂದಾಯಿತ ದಾಖಲೆಯಲ್ಲಿ ಸಹ ಪ್ರತಿ ಎಕರೇಗೆ 1 ಲಕ್ಷ 23 ಸಾವಿರ ಹಣ ಎಂದು ನಮೂದು ಆಗಿರುತ್ತದೆ. ಸುಳ್ಳು ನೊಂದಾಯಿತ ಕ್ರಯಪತ್ರವನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ.

3ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡುವ ಯಾವುದೆ ಅಧಿಕಾರ ಇರುವುದಿಲ್ಲ

ಎಂದರೆ ಸರಿಯಲ್ಲ. ನನ್ನ ಕುಟುಂಬದ ಅವಶ್ಯಕತೆಗಾಗಿ ನನ್ನ ಕುಟುಂಬದ ಆಸ್ತಿಯನ್ನು ನಾನು ಮಾರಾಟ ಮಾಡಿದ್ದೇನೆ ಎಂದರೆ ಸರಿ. ನಾನು ಹೇಳಿದಂತೆ ಪ್ರತಿ ಎಕರೆಗೆ 1 ಲಕ್ಷ 23 ಸಾವಿರ ನಮೂದು ಇದ್ದರೆ ಒಟ್ಟು ಜಮೀನಿಗೆ 6.5 ಲಕ್ಷಕ್ಕಿಂತ ಜಾಸ್ತಿ ಆಗುತದೆ ಎಂದರೆ ಸಾಕ್ಷಿ 7.5 ಲಕ್ಷ ಆಗಿದೆ ಎಂದು ನುಡಿಯುತ್ತಾರೆ.

ನಮ್ಮ ಕುಟುಂಬದ ಜಮೀನಿನ ಸರ್ವೆ ನಂ. 159 ಇತ್ತು ಎಂದರೆ ಸರಿ. ನಾನು ಸಲ್ಲಿಸಿದ ನಿಡಿ 1 ಮತ್ತು 2 ರಲ್ಲಿ ಪ್ರತಿ ಎಕರೆಗೆ 65 ಸಾವಿರ ಎಂದು ನಮೂದು ಇದೆ ಎಂದರೆ ಸಾಕ್ಷಿ ಅದು ಸರಕಾರದ ಮೌಲ್ಯ ಎಂದು ನುಡಿಯುತ್ತಾರೆ. 2008 ರಲ್ಲಿ ನಮ್ಮ ಕುಟುಂಬದ ಆಸ್ತಿಯನ್ನು ಮಾರಾಟ ಮಾಡಿದ್ದೇನೆ ಮತ್ತು 2009 ರಲ್ಲಿ 3ನೇ ಪ್ರತಿವಾದಿಯಿಂದ ಖರೀದಿ ಮಾಡಿದೇನೆ. 2009 ರಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡುವ ಅರ್ಹತೆ ನನ್ನ ಹತ್ತಿರ ಇರಲಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಯ ಮಾಲೀಕರು ಮತ್ತು ಕಬ್ಜೆದಾರರು 2ನೇ ಪ್ರತಿವಾದಿ ಹಾಗೂ ಅವರ ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಇದ್ದೇನೆ ಎಂದು ನುಡಿಯುತ್ತಾರೆ. ದಿನಾಂಕ: 29-06-2009 ರಂದು 7 ಲಕ್ಷ 50 ಸಾವಿರ ರೂಪಾಯಿ ನನ್ನ ಹತ್ತಿರ ಇತ್ತು ಎಂದು ತೊರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. 2007-08 ರಿಂದ 2ನೇ ಪ್ರತಿವಾದಿ ಅನಾರೋಗ್ಯದಿಂದ ಬಳಲುತ್ತಿದ್ದರೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ಅನಾರೋಗ್ಯದ ದುರುಪಯೋಗವನ್ನು ಪಡಿಸಿಕೊಂಡು ನಾನು ಹಾಗೂ 3ನೇ ಪ್ರತಿವಾದಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ಕುಟುಂಬದ ಸದಸ್ಯರು ಕ್ರಯಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯಲ್ಲಿ 3ನೇ ಪ್ರತಿವಾದಿಗೆ ಮಾತ್ರಾ ಹಕ್ಕು ಇರುವುದಿಲ್ಲ ಮತ್ತು ಎಲ್ಲಾ ಕುಟುಂಬಸ್ಥರಿಗೆ ಹಕ್ಕು ಇರುತ್ತದೆ ಎಂದರೆ ಸಾಕ್ಷಿ ಎಲ್ಲಾ ಕುಟುಂಬಸ್ಥರು ಸೇರಿ ನನಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಕುಟುಂಬಸ್ಥರ ಹಕ್ಕನ್ನು ಮುಳುಗಿಸಲು ನಾನು ಹಾಗೂ 3ನೇ ಪ್ರತಿವಾದಿ ಸುಳು ಕ್ರಯಪತ್ರವನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಜೀವಿತ ಕಾಲದಲ್ಲಿ 3ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**